# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 277 (915) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಅಡಗೂರ್ ಹೆಚ್. ವಿಶ್ವನಾಥ್<br>(ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 15.12.2025 |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಪ್ರಾಥಮಿಕ, ಪ್ರೌಢಶಾಲೆ ಮತ್ತು ಪಿಯು ಸಂಸ್ಥೆಗಳಲ್ಲಿ ನವೆಂಬರ್ 2025 ರ ವೇಳೆಗೆ ಮಂಜೂರಾದ ಮತ್ತು ಖಾಲಿ ಇರುವ ಬೋಧನಾ ಹುದ್ದೆಗಳ ನವೀಕರಿಸಿದ ಅಧಿಕೃತ ಅಂಕಿ ಅಂಶಗಳನ್ನು ಸರ್ಕಾರ ಪ್ರಕಟಿಸಬಹುದೇ;</td><td>ಸರ್ಕಾರಿ ಪ್ರಾಥಮಿಕ, ಪ್ರೌಢ ಶಾಲಾ ಶಿಕ್ಷಕರ ಹಾಗೂ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಹುದ್ದೆಗಳ ವಿವರ
<table>
<tr><th>ಕ್ರ. ಸಂ</th><th>ಶಿಕ್ಷಕರ ಹುದ್ದೆಗಳ ವಿವರ</th><th>ಪ್ರಾಥಮಿಕ ಶಾಲೆ</th><th>ಪ್ರೌಢ ಶಾಲೆ</th><th>ಪದವಿ ಪೂರ್ವ</th></tr>
<tr><td>1</td><td>ಮಂಜೂರಾದ ಹುದ್ದೆಗಳು</td><td>178935</td><td>144144</td><td>12913</td></tr>
<tr><td>2</td><td>ಕಾರ್ಯನಿರತ ಹುದ್ದೆಗಳು</td><td>133345</td><td>32010</td><td>7709</td></tr>
<tr><td>3</td><td>ಖಾಲಿ ಹುದ್ದೆಗಳು</td><td>45572</td><td>12134</td><td>5204</td></tr>
</table></td></tr>
<tr><td>(ಆ)</td><td>ರಾಜ್ಯದಲ್ಲಿ ವರದಿಯಾದ 59,772 ಶಿಕ್ಷಕರ ಹುದ್ದೆಗಳ ಭರ್ತಿಯ ಕುರಿತು-ನೇಮಕಾತಿಯ ವೇಳಾಪಟ್ಟಿ, ಪ್ರತಿ ವರ್ಗದ (ಪ್ರಾಥಮಿಕ, ಹಿ.ಪ್ರಾ., ಪ್ರೌಢ, ಪಿಯು) ಹುದ್ದೆಗಳ ವಿವರ ಮತ್ತು ನಡೆಯುತ್ತಿರುವ 18,600 ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಯಾವ ಹಂತದಲ್ಲಿದೆ;</td><td>ಪ್ರಾಥಮಿಕ ಮತ್ತು ಪ್ರೌಢ ವಿಭಾಗ:<br>"ಕಲ್ಯಾಣ ಕರ್ನಾಟಕ ಭಾಗದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ 5267 ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ದಿನಾಂಕ: 07.10.2024 ರಂದು ಅನುಮತಿ ನೀಡಲಾಗಿದೆ.<br>ಪದವಿ ಪೂರ್ವ ವಿಭಾಗ:<br>ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರ ನೇರ ನೇಮಕಾತಿ ಹುದ್ದೆಗಳ ಪೈಕಿ 814 ಹುದ್ದೆಗಳ ಭರ್ತಿಗೆ ಅನುಮತಿ ನೀಡಲಾಗಿದೆ.</td></tr>
<tr><td>(ಇ)</td><td>ಕಳೆದ 24 ತಿಂಗಳಲ್ಲಿ ಶಿಕ್ಷಕರ ನೇಮಕಾತಿಗಾಗಿ ಶಾಲಾ ಶಿಕ್ಷಣ ಇಲಾಖೆ/KPSC ಹೊರಡಿಸಿದ ಅಧಿಸೂಚನೆಗಳ ಸಂಖ್ಯೆ: ಅವುಗಳ ಪ್ರಗತಿ ಮತ್ತು ವಾಸ್ತವವಾಗಿ ಭರ್ತಿಯಾದ ಹುದ್ದೆಗಳ ಸಂಖ್ಯೆ ಎಷ್ಟು (ವಿವರ ನೀಡುವುದು)</td><td>ಕಳೆದ 24 ತಿಂಗಳಲ್ಲಿ ಶಿಕ್ಷಕರ ನೇಮಕಾತಿಗಾಗಿ ಶಾಲಾ ಶಿಕ್ಷಣ ಇಲಾಖೆಯಿಂದ ಯಾವುದೇ ಅಧಿಸೂಚನೆಯನ್ನು ಹೊರಡಿಸಿರುವುದಿಲ್ಲ.</td></tr>
<tr><td>(ಈ)</td><td>ರಾಜ್ಯದಲ್ಲಿ ಪ್ರಸ್ತುತ ಕೆಲಸ ಮಾಡುತ್ತಿರುವ ಅತಿಥಿ/ಗುತ್ತಿಗೆ ಶಿಕ್ಷಕರ ಸಂಖ್ಯೆ, ಅವರ ಸೇವಾ ಷರತ್ತುಗಳು (ವೇತನ, ರಜೆ, ನವೀಕರಣ, ಇಪಿಎಫ್ / ವೈದ್ಯಕೀಯ ಸೌಲಭ್ಯ) ಹಾಗೂ ದೀರ್ಘಕಾಲ ಸೇವೆ ಸಲ್ಲಿಸಿರುವ ಅತಿಥಿ ಶಿಕ್ಷಕರನ್ನು</td><td>ಪ್ರಾಥಮಿಕ/ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳಿಗೆದುರಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಶೈಕ್ಷಣಿಕ ವರ್ಷದ ಅಂತ್ಯದವರೆಗೆ ಕ್ರಮವಾಗಿ ಒಟ್ಟು 34027 ಹಾಗೂ 9499 ಅತಿಥಿ ಶಿಕ್ಷಕರನ್ನು ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಳ್ಳಲಾಗಿದೆ. ಈ ಎಲ್ಲಾ ಅತಿಥಿ ಶಿಕ್ಷಕರಿಗೂ ಗೌರವಧನ ಪಾವತಿಗೆ ಮಾತ್ರ ಅವಕಾಶವಿರುತ್ತದೆ.<br><br>ಅತಿಥಿ ಶಿಕ್ಷಕರನ್ನು ಖಾಯಂ ಹುದ್ದೆ ಭರ್ತಿಯಾಗುವವರೆಗೂ</td></tr>
</table>

| | | |
|---|---|---|
| | ಕ್ರಮಬದ್ಧಗೊಳಿಸುವ ಬಗ್ಗೆ ಸರ್ಕಾರದ ನಿಲುವು ಏನು;(ವಿವರ ನೀಡುವುದು) | ಅಥವಾ ಶೈಕ್ಷಣಿಕ ವರ್ಷದ ಅಂತ್ಯದವರೆಗೆ ತಾತ್ಕಾಲಿಕವಾಗಿ ಗೌರವಧನದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗುತ್ತಿರುವುದರಿಂದ ಕ್ರಮಬದ್ಧಗೊಳಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. |
| (ಉ) | ಕೆಲವು ಜಿಲ್ಲೆಗಳಲ್ಲಿ ವರದಿಯಾಗಿರುವ ಅತಿಥಿ ಶಿಕ್ಷಕರ ಬಾಕಿ ವೇತನ, ಸಕಾಲಿಕ ಪಾವತಿ ವ್ಯವಸ್ಥೆ ಮತ್ತು ಪಾರದರ್ಶಕ ನೇಮಕಾತಿಯನ್ನು ಖಚಿತಪಡಿಸಲು ತೆಗೆದುಕೊಳ್ಳುತ್ತಿರುವ ಕ್ರಮಗಳೇನು? | **ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ**:-<br>1. ಸರ್ಕಾರದ ಆದೇಶ ಸಂಖ್ಯೆ.ಅಇ 298 ವೆಚ್ಚ-6/2025, ದಿನಾಂಕ:15.07.2025 ರಂತೆ ಜೂನ್ 2025 ರಿಂದ ಅಕ್ಟೋಬರ್-2025ರವರೆಗಿನ 5 ತಿಂಗಳ ಗೌರವಧನ ಪಾವತಿಗಾಗಿ ರೂ.20416.20 ಲಕ್ಷಗಳ (ಇಪ್ಪತ್ತು ಸಾವಿರದ ನಾಲ್ಕು ನೂರ ಹದಿನಾರು ಲಕ್ಷದ ಇಪ್ಪತ್ತು ಸಾವಿರ ರೂಪಾಯಿಗಳು ಮಾತ್ರ) ಅನುದಾನವನ್ನು ತಾಲ್ಲೂಕು ಪಂಚಾಯತ್ ಮೂಲಕ ಹಂಚಿಕೆ ಮಾಡಿ ಬಿಡುಗಡೆಗೊಳಿಸಲಾಗಿದೆ.<br>2. ಬಿಡುಗಡೆಗೊಂಡ ಅನುದಾನವನ್ನು ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ನಿಗದಿತ ಶೀರ್ಷಿಕೆಯಡಿ ಖಜಾನೆಗಳ ಮೂಲಕ ಅತಿಥಿ ಶಿಕ್ಷಕರಿಗೆ ಜೂನ್ -2025 ರಿಂದ ಅಕ್ಟೋಬರ್-2025ರವರೆಗೆ 5 ತಿಂಗಳ ಗೌರವಧನ ಪಾವತಿ ಮಾಡಲು ಕ್ರಮವಹಿಸಲಾಗಿದೆ.<br><br>**ಸರ್ಕಾರಿ ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ :-**<br>ಸರ್ಕಾರದ ಆದೇಶ ಸಂಖ್ಯೆ.ಆಇ 298 ವೆಚ್ಚ/6/2025-ಇ ದಿನಾಂಕ:15.07.2025 ಮತ್ತು 29.08.2025ರಲ್ಲಿ ಸರ್ಕಾರಿ ಪ್ರೌಢಶಾಲೆಗಳಿಗೆ ಜೂನ್-2025 ರಿಂದ ನವಂಬರ್ -2025ರ ಆರು ತಿಂಗಳ ಗೌರವಧನವನ್ನು ಪಾವತಿಸಲು ಆಯಾ ತಾಲ್ಲೂಕು ಪಂಚಾಯ್ತಿಗೆ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.<br><br>ಸದರಿ ವಿಷಯವಾಗಿ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಜ್ಞಾಪನ ದಿನಾಂಕ:15.09.2025 ರಂದು ಜ್ಞಾಪನವನ್ನು ಹೊರಡಿಸಿ ತಾಲ್ಲೂಕು ಪಂಚಾಯ್ತಿಯಿಂದ ಅನುದಾನವನ್ನು DDO Loginಗೆ Upload ಮಾಡಿಸಿಕೊಂಡು ವಿಳಂಬಕ್ಕೆ ಅವಕಾಶ ನೀಡದಂತೆ ನಿಯಮಾನುಸಾರ ಅತಿಥಿ ಶಿಕ್ಷಕರ ಗೌರವಧನವನ್ನು ಪಾವತಿಸುವಂತೆ ಕ್ರಮವಹಿಸಲು ಸೂಚಿಸಲಾಗಿದ್ದು , ಅದರಂತೆ ಕ್ರಮವಹಿಸಲಾಗುತ್ತಿದೆ. |

**ಇಪಿ 142 ಪಿಎಂಎ 2025**

**(ಎಸ್. ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು